**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ- ಶ್ರೀ ಎಂ ಸಿ ಪಿ ವಕೀಲರಿಂದ ವಾದಿಯ ಪರವಾಗಿ**

7. ಸರ್ವೇ ನಂ. 54 ಒಟ್ಟು 51 ಎಕರೆ ಇರುತ್ತದೆ. 1 ನೇ ದಾವಾಸ್ವತ್ತು 16 ಎಕರೆ ಇರುತ್ತದೆ. ಸದರಿ 1 ನೇ ದಾವಾಸ್ವತ್ತಿನ ಪೂರ್ವಕ್ಕೆ - ಕೆ.ಎಲ್.ರಮೇಶ್ ಹಾಗೂ ಶರಣಮ್ಮ ಅವರ ಜಮೀನು, ದಕ್ಷಿಣಕ್ಕೆ ಎನ್.ಹೆಚ್.-13 ರಸ್ತೆ, ಉತ್ತರಕ್ಕೆ ಮೂಕಾಲ್ ತಿಪ್ಪಣ ರವರ ಜಮೀನು ಹಾಗೂ ಪಶ್ಚಿಮ್ಕೆ ಬಸಪ್ಪನ ಮನೆ ಇದೆ. ದಾವಾಸ್ವತ್ತಿನ ಚಕ್ ಬಂದಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ದಾವಾಸ್ವತ್ತು ಸರ್ವೇ ನಂ. 32 ಇರುತ್ತದೆ. ಸದರಿ ಜಮೀನು 6 ಎಕರೆ 8 ಗುಂಟೆ ಇರುತ್ತದೆ. ಸದರಿ ಜಮೀನಿನ ಚಕ್ ಬಂದಿ ಪೂರ್ವಕ್ಕೆ - ಚಿಕ್ಕಪ್ಪನ ಹಳ್ಳಿ ರಸ್ತೆ, ಪಶ್ಚಿಮಕ್ಕೆ - ತಾಡಪತ್ರಿ ಬಸಣ್ಣ ರವರ ಜಮೀನು, ಉತ್ತರಕ್ಕೆ - ಈಶ್ವರಪ್ಪ ಹಾಗೂ ಸೂರಪ್ಪ ರವರ ಜಮೀನು, ದಕ್ಷಿಣಕ್ಕೆ- ತಿಪ್ಪಣ್ಣ-ಗಂಗಣ್ಣ ರವರ ಜಮೀನು ಇರುತ್ತದೆ. ನಾನು 2 ನೇ ದಾವಾಸ್ವತ್ತಿನ ಚಕ್ ಬಂದಿ ತಪ್ಪಾಗಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ದಾವಾಸ್ವತ್ತು ಅಸ್ಥಿತ್ವದಲ್ಲಿ ಇರುವುದಿಲ್ಲ.

8. 1 ನೇ ದಾವಾಸ್ವತ್ತಿನಲ್ಲಿ ಬುಡ್ಲೇರ್ ರುದ್ರಪ್ಪ ಹಾಗೂ ನಾಗಮ್ಮ ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ಸದರಿ ದಾವಾಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿ ಇದ್ದೇವು. ಸದರಿ ಸ್ವತ್ತಿನಲ್ಲಿ ಮೂಲ ಕ್ರಯಪತ್ರ ಹಾಗೂ ಪಹಣಿ ಪತ್ರಗಳು ಬುಡ್ಲೇರ್ ರುದ್ರಪ್ಪ ಹಾಗೂ ರುದ್ರಮ್ಮ ಅವರ ಹತ್ತಿರ ಇರುತ್ತವೆ. ಬುಡ್ಲೇರ್ ರುದ್ರಪ್ಪ ಮೂಕಮ್ಮನ ಗಂಡ ಎಂದರೆ ಸರಿಯಲ್ಲ. ಮೂಕಮ್ಮನ ಗಂಡ ಪಾಲೈಯ್ಯ ಎಂದು ನನ್ನ ತಕರಾರಿನಲ್ಲಿ ಅಥವಾ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದಿಲ್ಲ. ಮೂಲ ದಾಖಲಾತಿಗಳನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುವುದಿಲ್ಲ.

9. ಮೂಕಮ್ಮನ ಗಂಡ ತೀರಿಕೊಂಡ ಮೇಲೆ ನಿಪಿ-2 ರಂತೆ ಆಕೆಯ ಹೆಸರಿಗೆ ಖಾತೆ ಬದಲಾವಣೆಯಾಗಿತ್ತುದೆ ಎಂದರೆ ಸರಿ. ಮೂಲ ಸ್ವತ್ತುಗಳು ಮೂಕಮ್ಮನ ಆಸ್ತಿಗಳು ಎಂದು ನನ್ನ ತಕರಾರಿನಲ್ಲಿ ಹೇಳಿರುತ್ತೇನೆ. 1 ನೇ ದಾವಾಸ್ವತ್ತು ಮೂಕಮ್ಮನ ಸ್ವತ್ತು ಎಂದು ತೋರಿಸಲು ನಾನು ಕ್ರಯ ಪತ್ರ ಹಾಜರುಪಡಿಸಿರುತ್ತೇನೆ. ಮೂಕಮ್ಮ ರವರ ಮದುವೆ ಬುಡ್ಲೇರ್ ರುದ್ರಪ್ಪ ರವರ ಮನೆತನದಲ್ಲಿ ಮಾಡಿದ್ದೇವು ಅವರ ಮಗ ಪಾಲೈಯ್ಯ ತೀರಿಕೊಂಡ ಮೇಲೆ 1 ನೇ ದಾವಾಸ್ವತ್ತು ಮೂಕಮ್ಮನ ಹೆಸರಿಗೆ ಪೌತಿ ಖಾತೆಯಾಗಿರುತ್ತದೆ. ಮೂಕಮ್ಮನ ಗಂಡನ ಹೆಸರು ರುದ್ರಪ್ಪ ಎಂದರೆ ಸರಿಯಲ್ಲ. ಮೂಕಮ್ಮನ ಗಂಡ ಪಾಲೈಯ್ಯ

ಎಂದು ತೋರಿಸಲು ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ. ಮೂಕಮ್ಮನ ಗಂಡ ಪಾಲೈಯ್ಯ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ.

**ಪಾಟೀ ಸವಾಲುಃ-** ವಾದಿಯರ ಪರ ವಕೀಲರು ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ. ಇದೆ.

2 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಚಿತ್ರದುರ್ಗ